# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ.89/2020

ಚಾಸಾಃ 31 ಪ್ರಾಸಾಃ13

**ದಿನಾಂಕ 19.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಹೆಸರು | ಸಂತೋಷ್ ಡಿ ಆರ್ |
| ತಂದೆಯ ಹೆಸರು | ರಾಜಶೇಖರ್ |
| ವಯಸ್ಸು | 41 ವರ್ಷ |
| ಕೆಲಸ | ಮುಖ್ಯಪೇದೆ ಸಂಖ್ಯೆ 298 , ಕ್ಯಾತ್ಸಂದ್ರ ಪೊಲೀಸ್ ಠಾಣೆ |
| ವಾಸಸ್ಥಳ | ಕ್ಯಾತ್ಸಂದ್ರ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ದಿ 15-08-18 ರಿಂದ ಇಲ್ಲಿಯವರಿಗೆ ಕ್ಯಾತ್ಸಂದ್ರ ವೃತ್ತ ಕಚೇರಿಯಲ್ಲಿ ತನಿಖಾ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಸಾ-37 ಈ ಪ್ರಕರಣದ ತನಿಖಾಧಿಕಾರಿಗಳು ಆಗಿದ್ದು , ಪ್ರಕರಣದ ತನಿಖಾಧಿಕಾರಿಗಳಿಗೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ .

2) ತನಿಖಾಧಿಕಾರಿಗಳು ಕೃತ್ಯ ನಡೆದ ಸ್ಥಳದಲ್ಲಿ ಮಾಡಿರುವ ಸ್ಥಳಪಂಚನಾಮೆ ಹಾಗೂ ಮೃತನ ಬಟ್ಟೆಗಳ ಅಮಾನತ್ತುಪಂಚನಾಮೆ ಹಾಗೂ ಆರೋಪಿಗಳು ತೋರಿಸಿರುವ ಸ್ಥಳ ಮತ್ತು ಅಮಾನತ್ತುಪಂಚನಾಮೆ, ಶವಪಂಚನಾಮೆಯ ಕಾಲದಲ್ಲಿ ತನಿಖಾಧಿಕಾರಿಗಳು ಸೂಚಿಸಿದಂತೆ ಠಾಣೆಯಿಂದ ನೀಡಿರುವ ಲ್ಯಾಪ್ ಟಾಪ್ ನಲ್ಲಿ ಪಂಚನಾಮೆಗಳನ್ನು ತಯಾರಿಸಿ, ಠಾಣೆಗೆ ನೀಡಿರುವ ಸೋನಿ ಹ್ಯಾಂಡಿ

ಕ್ಯಾಮರದಲ್ಲಿ ಠಾಣೆಯ ಸಿಬ್ಬಂದಿ ಫೋಟೋ ತೆಗೆದಿದ್ದು ಸದರಿ ಕ್ಯಾಮರಗೆ ಡಾಟಾ ಕೇಬಲ್ ಆಳವಡಿಸಿ ಪಂಚನಾಮೆಗೆ ಫೋಟೋಗಳನ್ನು ಆಳವಡಿಸಿ ಸ್ಥಳದಲ್ಲಿ ಪ್ರಿಂಟರ್ ಸಹಾಯದಿಂದ ಪ್ರಿಂಟ್ ಹಾಕಿರುತ್ತೇನೆ. ತನಿಖಾಧಿಕಾರಿಗಳು ಸೂಚಿಸಿದಂತೆ ಸಾಕ್ಷಿದಾರರ ಹೇಳಿಕೆಗಳನ್ನು ಪಡೆಯುವ ಸಮಯದಲ್ಲಿ ತನಿಖಾಧಿಕಾರಿಗಳು ಹೇಳಿದಂತೆ ಸಾಕ್ಷಿದಾರರ ಹೇಳಿಕೆಗಳನ್ನು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿ ಪ್ರಿಂಟ್ ಹಾಕಿ ನೀಡಿರುತ್ತೇನೆ .

3) ಪಂಚನಾಮೆ ಮತ್ತು ಹೇಳಿಕೆಗಳನ್ನು ಟೈಪ್ ಮಾಡಿ ನೀಡಿರುವ ಬಗ್ಗೆ ಕಲಂ.65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮ ಅಡಿಯಲ್ಲಿ ತನಿಖಾಧಿಕಾರಿಗಳಿಗೆ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ-24 ಎಂದು, ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-2,10,14,15 ಎಂದು ಗುರುತಿಸಲಾಗಿದೆ.

4) ಮೃತನ ಬಟ್ಟೆಗಳ ಅಮಾನತ್ತುಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-25 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 1 ಮತ್ತು 2 ಆರೋಪಿಯ ಪರ ಶ್ರೀ ಕೆಹೆಚ್ ಜಿ ವಕೀಲರಿಂದ ಃ-**

5) ನಾನು ತನಿಖಾ ಸಹಾಯಕನಾಗಿ ಸ್ಥಳಪಂಚನಾಮೆ, ಶವಪರೀಕ್ಷೆ , ಶವತನಿಖೆ ಪಂಚನಾಮೆ, ಅಮಾನತ್ತುಪಂಚನಾಮೆಗಳನ್ನು ಮಾಡಿರುತ್ತೇನೆ ಮತ್ತು ಅದರ ಬಗ್ಗೆ ಟೈಪ್ ಮಾಡಲು ನಾನು ಪರಿಣಿತಿ ಪಡೆದಿರುತ್ತೇನೆ . ಆ ಕುರಿತು ನಮ್ಮ ಇಲಾಖೆಯಿಂದ ಯಾವುದೇ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ಆದರೆ ತರಬೇತಿಯನ್ನು ಪಡೆದುಕೊಂಡಿರುತ್ತೇನೆ . ನಾನು

ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ಸದರಿ ಸ್ಥಳದಲ್ಲಿಯೇ ಟೈಪ್ ಮಾಡಿರುವುದಿಲ್ಲ, ಎಲ್ಲವನ್ನು ಠಾಣೆಯಲ್ಲಿ ಕುಳಿತುಕೊಂಡು ಟೈಪ್ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಾನು ನೀಡಿರುವ ಕಲಂ.65(ಬಿ) ಪ್ರಮಾಣ ಪತ್ರದಲ್ಲಿ ಯಾವ ಟೈಪ್ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿರುತ್ತೇನೆಂದು ನಮೂದು ಮಾಡಿರುವುದಿಲ್ಲ ಅಂದರೆ ಸರಿ. ಸದರಿ ಪ್ರಮಾಣ ಪತ್ರದಲ್ಲಿ ಯಾವ ಕಂಪನಿಯ ಹ್ಯಾಂಡಿ ಕ್ಯಾಮರದಲ್ಲಿ ಪೋಟೋ ತೆಗೆಯಲಾಗಿದೆ ಎಂದು ಸಹ ನಮೂದು ಮಾಡಿರುವುದಿಲ್ಲ ಅಂದರೆ ಸರಿ. ಹಾಗೆಯೇ ಯಾವ ತಂತ್ರಜ್ಞಾನ ಸಹಾಯದಿಂದ ಸದರಿ ಭಾವಚಿತ್ರಗಳ ಪ್ರಿಂಟ್ ತೆಗೆದಿದ್ದೇನೆಂದು ನಮೂದು ಮಾಡಿಲ್ಲ ಅಂದರೆ ಸರಿ. ಯಾವುದೇ ಸ್ಥಳಗಳಿಗೆ ಹೋಗದಿದ್ದರು ಸಹ ತನಿಖಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ . ನನಗೆ ಯಾವುದೇ ರೀತಿಯ ಟೈಪ್ ಮಾಡಲು ಬರದೇ ಇದ್ದರು ಸಹ ನಾನೇ ಟೈಪ್ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.